‘ಸಿಟಿ ಸ್ಕ್ಯಾನ್ ಮಾಡಿಸ್ಕೋ. ನೆಗ್ಲೆಕ್ಟ್ ಮಾಡಬೇಡ. ಓಲಾ ಬುಕ್ ಮಾಡಲೇ’ ಎಂದು ಕ್ಯಾಬ್ ತರಿಸಿಯೇ ಬಿಟ್ಟ. ನಾನು ವಿಧಿಇಲ್ಲದೆ ಮಗನ ವಿಧೇಯಕನಂತೆ ಲ್ಯಾಬಿಗೆ ತೆರಳಿದೆ. ಅಲ್ಲೋ ಕಡಲೇಕಾಯಿ ಪರಿಷೆ ಥರಾ ಜನ ತುಂಬಿದ್ದರು. ಅವರ ಮಧ್ಯೆ ತೂರಿಕೊಂಡು ಸ್ವಾಗತಗಿತ್ತಿಯೊಬ್ಬಳ ಕೈಯಲ್ಲಿ ಚೀಟಿಯನ್ನಿಟ್ಟೆ. ಅವಳು ಪರ್ಸಿನಿಂದ ಕನ್ನಡಿ ಕೈಗೆತ್ತಿಕೊಂಡು ಮುಖಾಲಂಕಾರ ಟಚಪ್ ಮಾಡಿಕೊಂಡು ಕಂಪ್ಯೂಟರಿನ ಮೇಲೆ ಕೈ ಆಡಿಸಿ ಏನನ್ನೋ ಓದಿಕೊಂಡಳು. ನಂತರ ‘10,200 ರೂಪಾಯಿ ಆಗುತ್ತೆ ಸರ್, ಕಟ್ಟಿ’ ಎಂದು ಅಪ್ಪಣೆ ಮಾಡಿದಳು. ನನಗೆ ಹೃದಯಾಘಾತವಾಗುವುದೊಂದು ಬಾಕಿ. ಸಾವರಿಸಿಕೊಂಡು ಕೇಳಿದೆ: ‘ಏನಮ್ಮ, ನಾನು ಸೀನಿಯರ್ ಸಿಟಿಜನ್. ಸಂಪಾದನೆ ಏನಿಲ್ಲ. ಕೊಂಚ ಕಮ್ಮಿ ಮಾಡಿಕೊಳ್ಳಿ. ಒಂದು 5 ಸಾವಿರದಲ್ಲಿ ಮುಗಿಸಿಕೊಡಿ.’

‘ಆಗಲ್ಲ ಸಾರ್, ಸೊಪ್ಪಿನ ವ್ಯಾಪಾರದ ಥರಾ ಚೌಕಾಶಿ ಮಾಡುತ್ತೀರಲ್ಲ.’

ಏನು ಮಾಡುವುದು? ಮಗನ ಆಜ್ಞೆ ಆಗಿದೆ. ಹಾಗೇ ಹೋದರೆ ಅಲ್ಲೂ ಮುಖ ಮುರಿಯುವಂಥ ಮಾತು ಕೇಳಬೇಕಾಗುತ್ತದೆ ಎಂದು ಸ್ವಗತದಲ್ಲೇ ಗೊಣಗಿಕೊಂಡು ಕಾರ್ಡು ಉಜ್ಜಿದೆ. ‘ಎರಡನೇ ಮಹಡಿ ಹತ್ತನೇ ನಂಬರ್ ರೂಮಿಗೆ ಹೋಗಿ’ ಎಂದಳು. ಅಲ್ಲಿ ಎರಡು ಗಂಟೆ ಕಾದು ಹತ್ತು ಹನ್ನೆರಡು ಜನಗಳದು ಮುಗಿದ ನಂತರ ನನ್ನ ಕರೆದರು. ಆ ರೂಮಿನೊಳಗೆ ಗುಹೆಯಾಕಾರದ ಒಂದು ಯಂತ್ರವಿತ್ತು. ಅದಕ್ಕೊಂದು ಮಂಚ ಲಗತ್ತಿಸಿದ್ದರು. ‘ಷರಟು ಬಿಚ್ಚಿ ಇದರ ಮೇಲೆ ಮಲಕ್ಕೊಳ್ಳಿ’ ಎಂದಳು ನರ್ಸ್.

‘ಷರಟಲ್ಲಮ್ಮ, ಇದು ಜುಬ್ಬ. ಜುಬ್ಬ ಇದ್ದರೆ ನಡೆಯಲ್ವ?’

‘ಷರಟೋ ಜುಬ್ಬಾನೋ... ಬಿಚ್ಚಿ. ಬಟ್ಟೆ ಇರಬಾರದು.’

ಸದ್ಯ ಪ್ಯಾಂಟೂ ಬಿಚ್ಚಿ ಎನ್ನಲಿಲ್ಲವಲ್ಲ ಎಂದು ನನ್ನ ಅದೃಷ್ಟವನ್ನು ಪ್ರಶಂಸಿಸುತ್ತಾ, ನರ್ಸ್ ಹೇಳಿದ ಹಾಗೆ ಮಾಡಿದೆ. ‘ನೋಡಿ, ನಾವು ಹೇಳಿದ ಹಾಗೆ ಮಾಡಬೇಕು. ಉಸಿರು ನಿಲ್ಲಿಸಿ ಎಂದರೆ ನಿಲ್ಲಿಸಬೇಕು. ಉಸಿರಾಡಿ ಎಂದಾಗ ಉಸಿರಾಡಬೇಕು’ ಎಂದು ಆದೇಶಿಸಿದಳು. ನಾನು ಮಲಗಿದ್ದ ಮಂಚ ಸರಿಯಲಾರಂಭಿಸಿ ಆ ಗುಹೆಯೊಳಕ್ಕೆ ಹೊಕ್ಕಿತು.

‘ಉಸಿರು ನಿಲ್ಲಿಸಿ.’

ಎರಡು ನಿಮಿಷಗಳ ನಂತರ, ‘ಈಗ ಉಸಿರಾಡಿ.’

ಹೀಗೆ ಎರಡು ಸಲ ಗುಹೆ ಪ್ರವೇಶ ಮತ್ತು ಉಸಿರು ನಿಲ್ಲಿಸು, ಉಸಿರಾಡುವ ಕಸರತ್ತು ನಡೆಯಿತು. ಎರಡು ಸಲ ಮುಗಿದು ಹೊರ ಬಂದ ನಂತರ, ‘ಆಯಿತು’ ಎಂದಳು. ನಾನು ಜುಬ್ಬ ಏರಿಸಿಕೊಂಡೆ.

‘ನಿಮಗೆ ಇ ಮೇಲ್ ಐಡಿ ಇಲ್ಲವೇ’ ನರ್ಸ್ ಪ್ರಶ್ನೆ.

‘ಇಲ್ಲಮ್ಮ, ನಮ್ಮನೇಲೇನಿದ್ದರೂ ಫಿಮೇಲ್ ಐಡಿಯದೇ ದರ್ಬಾರು.’

‘ಒಳ್ಳೇ ವಿಚಿತ್ರ ಮುದುಕ’ ಎಂದು ತನ್ನಲ್ಲೇ ಹೇಳಿಕೊಂಡು, ‘ಇ ಮೇಲ್ ಐಡಿ ಇದ್ದಿದ್ದರೆ ಒಂದು ಗಂಟೆಗೆಲ್ಲ ನಿಮಗೆ ರಿಪೋರ್ಟ್ ಸಿಗೋದು. ಸಂಜೆ ಐದು ಗಂಟೆ ಮೇಲೆ ಬನ್ನಿ, ರಿಪೋರ್ಟ್ ರೆಡಿ ಇರುತ್ತೆ’ ಎಂದು ನನ್ನನ್ನು ಅಲ್ಲಿಂದ ಸಾಗಹಾಕಿದಳು.

ರಿಪೋರ್ಟ್ ತೆಗೆದುಕೊಂಡು ಹೋಗಿ ಆರ್ಥೋ ತಜ್ಞರಿಗೆ ತೋರಿಸಿದೆ. ಮೂರು ಪುಟಗಳ ಅದರ ಮೇಲೆ ಒಂದೆರಡು ಸೆಕೆಂಡ್ ಕಣ್ಣುಹಾಯಿಸಿ, ‘ನಿಮಗೇನೂ ಆಗಿಲ್ಲಾರೀ... ವಯೋಸಹಜವಾಗಿ ಮೂಳೆಗಳೆಲ್ಲ ಮೆತ್ತಗಾಗಿ ಪುಡಿಪುಡಿಯಾಗೋ ಹಂತ ತಲುಪಿವೆ. ಹುಷಾರು, ಎಲ್ಲೂ ಜಾರಿ ಬೀಳೊಕೆ ಹೋಗಬೇಡಿ. ಈ ಹಂತದಲ್ಲಿ ನಾವು ಏನೂ ಮಾಡ್ಲಿಕ್ಕೆ ಆಗೋಲ್ಲ. ಪೇನ್ ಕಿಲ್ಲರ್ ತಗೊಳ್ಳಿ, ತುಂಬ ಜಾಸ್ತಿ ಆದಾಗ’ ಎಂದು ಹೇಳಿ, ಮಾತ್ರೆ ಬರೆದುಕೊಟ್ಟರು.

ಒಂದೆರಡು ದಿನ ತಡೆದುಕೊಳ್ಳೋ ಹಾಗಿತ್ತು. ಅಷ್ಟರಲ್ಲಿ ಮತ್ತೊಂದು ಸಮಸ್ಯೆ ಕಾಣಿಸಿಕೊಂಡಿತು. ಹೊಟ್ಟೇಲಿ ರಾಯಲ್ ಎನ್‌ಫೀಲ್ಡ್ ಮೋಟಾರ್ ಸೈಕಲ್ ಓಡಿಸಿದಹಾಗೆ ಗುಡುಗುಡು ಶಬ್ದ, ಎದೇಲಿ ಉರಿ. ಊಟ ಸೇರ್ತಿರಲಿಲ್ಲ. ಈ ಅವಸ್ಥೆಲಿದ್ದಾಗಲೇ ಗೆಳೆಯ ಸುಧೀಂದ್ರ ಬಂದ. ಅವನೆದುರು ನನ್ನ ಆರೋಗ್ಯ ದಿನೇದಿನೇ ಹೀಗೆ ಹದಗೆಡುತ್ತಿರುವುದನ್ನು ತೋಡಿಕೊಂಡೆ.

‘ಹೋಗಲಿ, ಹೋಮಿಯೋಪತಿನಾದರೂ ಟ್ರೈ ಮಾಡಿ ನೋಡೊ.’

‘ಅಯ್ಯಾ, ಈ ‘ಪತಿ’ಗಳ ಸಹವಾಸ ಸಾಕು. ಯಾರಾದರೂ ಪತ್ನಿಯರಿದ್ದರೆ ನೋಡು.’

‘ಈ ನರಳಾಟದಲ್ಲೂ ನಿನ್ನ ಸೊಟ್ಟ ಬುದ್ಧಿ ಬಿಡಲ್ಲ